

ಇಂದು ಸಾಕಷ್ಟು ಮಾರಣಾಂತಿಕ ರೋಗಗಳು ಮನುಷ್ಯರನ್ನು ಕಾಡುತ್ತಿದ್ದರೂ ಮುಂಚೂಣಿಯಲ್ಲಿ ಇರೋದು ಮಾತ್ರ ಕ್ಯಾನ್ಸರ್. ಸಾಕಷ್ಟು ಸುಧಾರಿತ ಚಿಕಿತ್ಸೆಗಳು ರೋಗಿಯ ಆಯಸ್ಸನ್ನು ಒಂದಷ್ಟು ವರ್ಷಗಳ ಮಟ್ಟಿಗೆ ಮುಂದಕ್ಕೆ ತಳ್ಳಿರಬಹುದು. ಆದರೆ ಕೆಲವೇ ವರ್ಷಗಳಲ್ಲಿ ಮರುಕಳಿಸುವಿಕೆಯಿಂದ ಸಂತ್ರಸ್ತರು ಚೇತರಿಸಿಕೊಳ್ಳಲಾಗದೆ ಸಾವಿನ ಮನೆಯ ಬಾಗಿಲು ತಟ್ಟುತ್ತಿದ್ದಾರೆ. ಇಂಥ ಕಟು ವಾಸ್ತವದ ನಡುವೆ ಕ್ಯಾನ್ಸರ್ ಅನ್ನು ಜಯಿಸಿ ಜೀವಿಸಿದವರು ಸಾಕಷ್ಟು ಮಂದಿ ಇದ್ದಾರೆ. ಒಂದೆರಡು ವರ್ಷವಲ್ಲ; ಒಂದು, ಎರಡು, ಮೂರು ದಶಕಗಳ ದಾಟಿ ಉತ್ತಮ ಜೀವನ ನಡೆಸುವವರಿದ್ದಾರೆ.

ಕ್ಯಾನ್ಸರ್‌ನೊಂದಿಗೆ ಹೆಣಗಾಡಿ, ಇನ್ನಿಲ್ಲವೆಂಬಷ್ಟು ನೋವು, ಯಾತನೆ ನುಂಗಿ, ಕೂಡಿಟ್ಟ ಹಣ ಬರಿದಾದ ಮೇಲೆ ಮತ್ತೆ ಫೀನಿಕ್ಸ್ ಪಕ್ಷಿಯಂತೆ ಎದ್ದು ನಿಂತು ಅಷ್ಟೊಂದು ಸುದೀರ್ಘ, ಸುಂದರ ಬದುಕು ಸಾಗಿಸುವುದೆಂದರೆ ಅದೊಂದು ಸವಾಲಿನ ಜೀವನವೇ ಸರಿ. ಮತ್ತೆ ಶೂನ್ಯದಿಂದ ಆರಂಭವಾಗುವ ಬದುಕಿನಲ್ಲಿ ಅವರು ಬದಲಾಯಿಸಿಕೊಳ್ಳುವ ಜೀವನ ಕ್ರಮ, ಆಹಾರ ಕ್ರಮ, ಯೋಗ, ವ್ಯಾಯಾಮ, ಸಕಾರಾತ್ಮಕತೆ ಎಲ್ಲವೂ ಪ್ರಮುಖವೆನಿಸಲಿವೆ. ಹೀಗೆ ದಕ್ಕಿದ ಪುನರ್ಜನ್ಮದಲ್ಲಿ ಹೊಸತನದೊಂದಿಗೆ ಅಚ್ಚರಿಯ ಬದುಕು ಸವೆಸುತ್ತಿದ್ದವರ ಸಾಲಿನಲ್ಲಿ ಎದ್ದು ಕಾಣುವವರು ಬೆಂಗಳೂರಿನ ಫರೀದಾ ರಿಜ್ವಾನ್, ಬಾಗಲಕೋಟೆಯ ಶ್ರೀನಿವಾಸ್ ಕಾಮೂರ್ತಿ, ಶಿರಸಿಯ ಪ್ರಿಯಾಂಕಾ ಕಾಮತ್.

